# ಕರ್ನಾಟಕ (ದಸ್ತಾವೇಜುಗಳ ನೋಂದಣಿ) ಮಾನ್ಯತಾ ಅಧಿನಿಯಮ, 1964

(ಕರ್ನಾಟಕ ರಾಜ್ಯಪತ್ರ, ಗುರುವಾರ, ಆಗಸ್ಟ್ 24, 2006, ಭಾಗ – IVಎ, 1470 ಮತ್ತು 1471ನೇ ಪುಟಗಳಲ್ಲಿ ಪ್ರಕಟಿತವಾಗಿದೆ).

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು:**

1. ಚಿಕ್ಕ ಹೆಸರು

2. ಕುಣಿಗಲ್ ತಾಲ್ಲೂಕಿನ ಎಡಿಯೂರು ಹೋಬಳಿಯಲ್ಲಿರುವ ಸ್ವತ್ತುಗಳಿಗೆ ಸಂಬಂಧಿಸಿದ ಕೆಲವು ದಸ್ತಾವೇಜುಗಳ ನೋಂದಣಿಯನ್ನು ಸಿಂಧುಗೊಳಿಸುವುದು

* * *

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**1964ರ ಅಧಿನಿಯಮ 45:-** ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರಿನಲ್ಲಿ ಈ ಮುಂದಿನ ಅಧಿಕಾರ ವ್ಯಾಪ್ತಿಯೊಂದಿಗೆ 1961ರ ಆಗಸ್ಟ್ ಒಂದರಿಂದ ಜಾರಿಗೆ ಬರುವಂತೆ ಒಂದು ಹೊಸ ಉಪ ನೋಂದಣಿ ಕಛೇರಿಯನ್ನು ತೆರೆಯಲಾಯಿತು:

(1) ಕುಣಿಗಲ್‌ನ ಉಪ ನೋಂದಣಿ ಕಛೇರಿಯ ಅಧಿಕಾರ ವ್ಯಾಪ್ತಿಯಲ್ಲಿ ಇದ್ದ ಎಡಿಯೂರು ಹೋಬಳಿಯ 63 ಗ್ರಾಮಗಳು;

(2) ತುರುವೇಕೆರೆಯ ಉಪ ನೋಂದಣಿ ಕಛೇರಿಯ ಅಧಿಕಾರ ವ್ಯಾಪ್ತಿಯಲ್ಲಿ ಇದ್ದ ಮಾಯಸಂದ್ರ ಹೋಬಳಿಯ 5 ಗ್ರಾಮಗಳು;

(3) ನಾಗಮಂಗಲ ಉಪ ನೋಂದಣಿ ಕಛೇರಿಯ ಅಧಿಕಾರ ವ್ಯಾಪ್ತಿಯಲ್ಲಿ ಇದ್ದ ನೆಲ್ಲಿಗೆರೆ ಹೋಬಳಿಯ 83 ಗ್ರಾಮಗಳು;

(4) ನಾಗಮಂಗಲ ಉಪ ನೋಂದಣಿ ಕಛೇರಿಯ ಅಧಿಕಾರ ವ್ಯಾಪ್ತಿಯಲ್ಲಿ ಇದ್ದ ಬಿಂಡಿಗನವಿಲೆ ಹೋಬಳಿಯ 75 ಗ್ರಾಮಗಳು.

ಈ ಕಛೇರಿಯನ್ನು ರಚಿಸುವ ಮುನ್ನ, 'ಎಡಿಯೂರು ಹೋಬಳಿಯ ಸಾರ್ವಜನಿಕರು ತಮ್ಮ ಗ್ರಾಮಗಳನ್ನು ಕುಣಿಗಲ್ ಉಪ ನೋಂದಣಿ ಕಛೇರಿಯ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿಯೇ ಮುಂದುವರಿಸಬೇಕೆಂದು ಮನವಿ ಸಲ್ಲಿಸಿದ್ದರು. ಈ ಮನವಿಯ ಪರಿಶೀಲನೆಯು ಇತ್ಯರ್ಥವಾಗುವವರೆಗೆ, ಎಡಿಯೂರು ಹೋಬಳಿಯ 63 ಗ್ರಾಮಗಳ ಸ್ವತ್ತುಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು, ಕುಣಿಗಲ್ ಉಪ ನೋಂದಣಿ ಕಛೇರಿಯಲ್ಲಿ ನೋಂದಾಯಿಸುವಂತೆ ಆದೇಶಿಸಲಾಯಿತು. ಆ ತರುವಾಯ' ಈ 63 ಗ್ರಾಮಗಳನ್ನು ಕುಣಿಗಲ್ ಉಪ ನೋಂದಣಿ ಕಛೇರಿಯ ಅಧಿಕಾರ ವ್ಯಾಪ್ತಿಗೆ ವರ್ಗಾಯಿಸುವಂತೆ ಆದೇಶಿಸಲಾಯಿತು. ಹೀಗೆ, ಎಡಿಯೂರು ಹೋಬಳಿಯ 63 ಗ್ರಾಮಗಳನ್ನು 1961ರ ಆಗಸ್ಟ್ ಒಂದರಿಂದ 1962ರ ಏಪ್ರಿಲ್ ಮೂವತ್ತರವರೆಗೆ ಬೆಳ್ಳೂರು ಉಪ ನೋಂದಣಿ ಅಧಿಕಾರಿಯ ಅಧಿಕಾರ ವ್ಯಾಪ್ತಿಯೊಳಗೆ ಬರುವಂತೆ ಸೇರಿಸಲಾಯಿತು. ಆದರೆ, ಈ ಗ್ರಾಮಗಳಲ್ಲಿದ್ದ ಸ್ವತ್ತುಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು, ಸದರಿ ಅವಧಿಯಲ್ಲಿ ಕುಣಿಗಲ್ ಉಪ ನೋಂದಣಿ ಕಛೇರಿಯಲ್ಲಿ ನೋಂದಾಯಿಸಲಾಗಿತ್ತು.

ಸದರಿ ದಸ್ತಾವೇಜುಗಳ ನೋಂದಣಿಯನ್ನು ಮಾನ್ಯಗೊಳಿಸುವುದು ಅವಶ್ಯವಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 1964ರ ಏಪ್ರಿಲ್ 2ರ ಕರ್ನಾಟಕ ರಾಜ್ಯ ಪತ್ರದ (ವಿಶೇಷ ಸಂಚಿಕೆ), ಭಾಗ IVಎ ಯಲ್ಲಿ ಪುಟ 3ರಲ್ಲಿ ಸಂಖ್ಯೆ 70 ಎಂದು ಪ್ರಕಟವಾಗಿದೆ.)

**1964ರ [1][ಕರ್ನಾಟಕ ಅಧಿನಿಯಮ][1] ಸಂಖ್ಯೆ 45**
**(1964ರ ಡಿಸೆಂಬರ್ ಹತ್ತರಂದು [1][ಕರ್ನಾಟಕ ರಾಜಪತ್ರ][1] ದಲ್ಲಿ ಮೊದಲು ಪ್ರಕಟವಾಗಿದೆ)**

# [1][ಕರ್ನಾಟಕ][1] (ದಸ್ತಾವೇಜುಗಳ ನೋಂದಣಿ) ಮಾನ್ಯತಾ ಅಧಿನಿಯಮ, 1964

**(1964ರ ನವೆಂಬರ್ ಇಪ್ಪತ್ತಾರನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮೋದನೆಯನ್ನು ಪಡೆಯಲಾಗಿದೆ.)**

ಕುಣಿಗಲ್ ಉಪ ನೋಂದಣಿ ಕಛೇರಿಯಲ್ಲಿ ನೋಂದಾಯಿಸಿದ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಎಡಿಯೂರು ಹೋಬಳಿಯಲ್ಲಿರುವ ಸ್ವತ್ತಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಮಾನ್ಯಗೊಳಿಸಲು ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಎಡಿಯೂರು ಹೋಬಳಿಯು ಕುಣಿಗಲ್ ಉಪ ಜಿಲ್ಲೆಯ ಅಧಿಕಾರ ವ್ಯಾಪ್ತಿಯಲ್ಲಿ ಇದ್ದುದರಿಂದ;

ಮತ್ತು, ಸದರಿ ಎಡಿಯೂರು ಹೋಬಳಿಯನ್ನು 1961ರ ಆಗಸ್ಟ್ ಒಂದರಿಂದ 1962ರ ಏಪ್ರಿಲ್ 30ರ ವರೆಗೆ ಮಂಡ್ಯ ಜಿಲ್ಲೆಯ ಬೆಳ್ಳೂರು ಉಪ ಜಿಲ್ಲೆಯ ಅಧಿಕಾರ ವ್ಯಾಪ್ತಿಯಲ್ಲಿ ಸೇರಿಸಲಾಗಿದ್ದುದರಿಂದ;

ಮತ್ತು, ಸದರಿ ಎಡಿಯೂರು ಹೋಬಳಿಯಲ್ಲಿರುವ ಸ್ವತ್ತಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಸದರಿ ಅವಧಿಯಲ್ಲಿ ಕುಣಿಗಲ್ ಉಪ ನೋಂದಣಿ ಕಛೇರಿಯಲ್ಲಿ ನೋಂದಾಯಿಸಲಾಗಿದ್ದುದರಿಂದ;

ಮತ್ತು ಸದರಿ ದಸ್ತಾವೇಜುಗಳ ನೋಂದಣಿಯನ್ನು ಮಾನ್ಯಗೊಳಿಸುವುದು ವಿಹಿತವೆಂದು ಭಾವಿಸಲಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಹದಿನೈದನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 01-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಚಿಕ್ಕ ಹೆಸರು:-** ಈ ಅಧಿನಿಯಮವನ್ನು [1][ಕರ್ನಾಟಕ][1] (ದಸ್ತಾವೇಜುಗಳ ನೋಂದಣಿ) ಮಾನ್ಯತಾ ಅಧಿನಿಯಮ, 1964 ಎಂದು ಕರೆಯತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 01-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**2. ಕುಣಿಗಲ್ ತಾಲ್ಲೂಕಿನ ಎಡಿಯೂರು ಹೋಬಳಿಯಲ್ಲಿರುವ ಸ್ವತ್ತುಗಳಿಗೆ ಸಂಬಂಧಿಸಿದ ಕೆಲವು ದಸ್ತಾವೇಜುಗಳ ನೋಂದಣಿಯನ್ನು ಸಿಂಧುಗೊಳಿಸುವುದು:-** ಭಾರತೀಯ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ XIV) ರಲ್ಲಿ ಏನೇ ಒಳಗೊಂಡಿದ್ದರೂ, 1961ರ ಆಗಸ್ಟ್ ಒಂದರಿಂದ ಪ್ರಾರಂಭವಾಗಿ ಮತ್ತು 1962ರ ಏಪ್ರಿಲ್ ಮೂವತ್ತರಂದು ಕೊನೆಗೊಳ್ಳುವ ಅವಧಿಯಲ್ಲಿ, ತುಮಕೂರು ಜಿಲ್ಲೆಯ ಕುಣಿಗಲ್ ಉಪನೋಂದಣಿ ಕಛೇರಿಯಲ್ಲಿ ನೋಂದಾಯಿಸಲಾಗಿದ್ದ, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಎಡಿಯೂರು ಹೋಬಳಿಯಲ್ಲಿರುವ ಯಾವುದೇ ಸ್ವತ್ತಿಗೆ ಸಂಬಂಧಪಟ್ಟ ದಸ್ತಾವೇಜುಗಳನ್ನು ಆ ಕಛೇರಿಯಲ್ಲಿ ಮಾನ್ಯವಾಗಿ ನೋಂದಾಯಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅಂಥ ಯಾವುದೇ ನೋಂದಣಿಯನ್ನು, ಮಂಡ್ಯ ಜಿಲ್ಲೆಯ ಬೆಳ್ಳೂರು ಉಪ ನೋಂದಣಿ ಕಛೇರಿಯಲ್ಲಿ ನೋಂದಾಯಿಸಿಲ್ಲವೆಂಬ ಕಾರಣ ಮಾತ್ರದಿಂದಲೇ ಅದನ್ನು ಪ್ರಶ್ನಿಸತಕ್ಕದ್ದಲ್ಲ.

* * *

The above Translation of the Karnataka (Registration of Documents) Validation Act, 1964 (45 of 1964) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

ಪಿ.ಆರ್. 1207

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.